## ಲಂಚ ತರಿಸೋಣ...

ಸುಮಾರು 47 ವರ್ಷಗಳ ಹಿಂದಿನ ಮಾತು. ಆಗ 'ಲಂಚ' ಎನ್ನುವುದು ಇಷ್ಟು ಸರ್ವವ್ಯಾಪಿ ಆಗಿರಲಿಲ್ಲ. ಯಾರಾದರೂ ಲಂಚ ತಿಂದಿದ್ದಾರೆ ಎಂದು ಗೊತ್ತಾದರೆ ಜನರು ಛೀಮಾರಿ ಹಾಕುತ್ತಿದ್ದರು. ಲಂಚ ತಿಂದವರೂ ತಪ್ಪಿತಸ್ಥ ಭಾವದಿಂದ ಕುಸಿದು ಹೋಗುತ್ತಿದ್ದರು.

ನಾವಾಗ ಎಂಜಿನಿಯರ್ಸ್ ಕ್ವಾರ್ಟರ್ಸ್‌ನಲ್ಲಿ ವಾಸವಿದ್ದೆವು. ಅಲ್ಲಿ ಒಬ್ಬ ಎಂಜಿನಿಯರ್ ಲಂಚ ತಿಂದು ಸಸ್ಪೆಂಡ್ ಆಗಿದ್ದರು. ಎಲ್ಲಾಕಡೆ ಅದೇ ಮಾತು, ಚರ್ಚೆ ನಡೆದಿತ್ತು. ನನ್ನ ಪುಟ್ಟ ತಮ್ಮ ನರ್ಸರಿಯಲ್ಲಿ ಓದುತ್ತಿದ್ದ. ಒಂದಿನ ಮಧ್ಯಾಹ್ನ ಮನೆಗೆ ಬಂದವನೇ, 'ಅಮ್ಮ, ನಮ್ ಮನೆಯೊಳಗೆ ಒಮ್ಮೆಯೂ ಲಂಚ ತರಿಸಿಲ್ಲ. ನಾವೂ ಲಂಚ ತರಿಸೋಣ ಅಮ್ಮಾ, ನಾನು ಒಂದು ಸಲಾನೂ ಲಂಚ ತಿಂದೇ ಇಲ್ಲ...' ಅಂತ ಹೇಳಿದಾಗ ಮನೆ ತುಂಬಾ ನಗು.

**ರೇವತಿ ಎಂ. ಅಗ್ನಿಹೋತ್ರಿ**





## ಜಿರಲೆಯ ತರಲೆ

'ಮಾ' ಮಹಿಳಾ ಸಮಾಜದ ವಾರ್ಷಿಕೋತ್ಸವದ ನಿಮಿತ್ತ ಅಂದು ಸಂಜೆ 'ವೀರರಾಣಿ ಕಿತ್ತೂರು ಚೆನ್ನಮ್ಮ' ನಾಟಕ ಪ್ರದರ್ಶನ ನಡೆಯುತ್ತಿತ್ತು. ಚೆನ್ನಮ್ಮನ ಪಾತ್ರಕ್ಕೆ ಅದೇ ಸಮಾಜದ ಕಾರ್ಯದರ್ಶಿಯಾಗಿದ್ದ ದುರ್ಗಮ್ಮ ಆಯ್ಕೆಯಾಗಿದ್ದರು. ಥ್ಯಾಕರೆ ಹಾಗೂ ಚೆನ್ನಮ್ಮಳ ನಡುವೆ ಬಿರುಸಿನ ಸಂಭಾಷಣೆ ನಡೆಯುತ್ತಿತ್ತು. ವೀರಾವೇಶಳಾದ ಚೆನ್ನಮ್ಮ ತನ್ನ ಕೈಯೊಳಗಿನ ಕತ್ತಿಯನ್ನು ಝಳಪಿಸುತ್ತ ಥ್ಯಾಕರೆಯ ಕತ್ತಿನ ಬಳಿ ತಂದಾಗ ಆತ ತನ್ನ ತೋರುಬೆರಳನ್ನು ಚೆನ್ನಮ್ಮ ಕತ್ತಿ ಹಿಡಿದ ಕೈ ಕಡೆ ತೋರುತ್ತ 'ಜಿ... ಜಿ... ಜಿ...' ಎಂದು ತೊದಲತೊಡಗಿದ. ಚೆನ್ನಮ್ಮ ಇನ್ನಷ್ಟು ಆವೇಶದಿಂದ 'ಏನೊ ಬಿಳೀ ಕುನ್ನಿ, ಅದೇನು ಜಿ... ಜಿ... ಅನ್ನುತ್ತಿದ್ದಿಯಾ?' ಎಂದಳು. ಆತ 'ಜಿರಲೆ... ನಿಮ್ಮ ಮುಂಗೈ ಮೇಲೆ ಜಿರಲೆ...' ಎಂದು ಹೇಳಿದ್ದೇ ಬಂತು. ದುರ್ಗಮ್ಮ ಗಾಬರಿಗೊಂಡು 'ಜಿರಲೆ ಜಿರಲೆ...' ಎನ್ನುತ್ತ ಇಡೀ ವೇದಿಕೆಯ ಮೇಲೆಲ್ಲಾ ಕುಣಿದಾಡಿದಳು.

**ಅರವಿಂದ ಜಿ. ಜೋಷಿ**